# ನಿಮ್ಮೊಡನೆ

# ಅಕ್ಷರತಾಯಿ ಸದ್ಬುದ್ಧಿ ಕರುಣಿಸಲಿ

ಸರ್ಕಾರಿ ಶಾಲೆಗಳದು ಒಂದು ಬಗೆಯ ಅನಾಥ ಸ್ಥಿತಿ. 'ಅಯ್ಯೋ...' ಎಂದು ಮರುಕಪಡುವ ಧ್ವನಿ ಯಾವುದೋ ಒಂದು ರೂಪದಲ್ಲಿ ಎಲ್ಲಿಂದಲೋ ನಿರಂತರವಾಗಿ ಹೊಮ್ಮುತ್ತಲೇ ಇದ್ದರೂ ಆ ವಿವೇಕದ ಧ್ವನಿ ಕೂಡ ಸರ್ಕಾರಿ ಶಾಲೆಗಳಂತೆಯೇ ನಿಶ್ಶಕ್ತವಾದುದು! ಹಾಗಾಗಿ ಅದು ತಲುಪಬೇಕಾದವರನ್ನು ತಲುಪುತ್ತಿಲ್ಲ. ಬೀರಬೇಕಾದ ಪರಿಣಾಮ ಬೀರುತ್ತಿಲ್ಲ. ಪರಿಣಾಮವಾಗಿ ಶಾಲೆಗಳ ದುಃಸ್ಥಿತಿ ದಿನೇ ದಿನೇ ಮತ್ತಷ್ಟು ಬಿಗಡಾಯಿಸುತ್ತಲೇ ಇದೆ. ಈ ಶಾಲೆಗಳನ್ನು ಉಳಿಸುವ, ಬಲಪಡಿಸುವ ವಿಚಾರದಲ್ಲಿ  ಸರ್ಕಾರ ಹಾಗೂ ಸಮುದಾಯ ಇವೆರಡೂ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಿಲ್ಲ. 'ಸರ್ಕಾರಿ ಶಾಲೆಗಳನ್ನು ಉಳಿಸಿಕೊಡಿ' ಎಂಬ ಕೂಗು ಸಮುದಾಯದ ಕಡೆಯಿಂದ ಕೇಳಿಬರುತ್ತಿಲ್ಲ. ಕ್ಷೀಣ ದನಿ ಸರ್ಕಾರಗಳನ್ನು ತಲುಪುತ್ತಿಲ್ಲ. ಕ್ಷೀಣವಾಗಿ ಆಡುವ ಯಾವ ಮಾತೂ ಸರ್ಕಾರಗಳನ್ನು ಕ್ರಿಯಾಶೀಲಗೊಳಿಸುವಂಥ ರಾಜಕೀಯ ಒತ್ತಡ ಸೃಷ್ಟಿಸಲಾರವು. ರಸ್ತೆ ಬೇಕು, ದೇವಸ್ಥಾನ ಬೇಕು ಎಂಬ ಆಗ್ರಹ, ಬೇಡಿಕೆ ಹೇಗೆ ಜೋರಾಗಿ ವ್ಯಕ್ತವಾಗುತ್ತದೆಯೋ ಹಾಗೆ ಶಾಲೆಗಳ ವಿಚಾರದಲ್ಲಿ ವ್ಯಕ್ತವಾಗುತ್ತಿಲ್ಲ. ಸಮುದಾಯಕ್ಕೇ ಬೇಡವಾಗಿದ್ದು, ಸರ್ಕಾರಕ್ಕೆ ಮಾತ್ರ ಏಕೆ ಬೇಕಾಗುತ್ತದೆ?


ಸರ್ವ ಶಿಕ್ಷಣ ಅಭಿಯಾನದ ಕರ್ನಾಟಕ 'ಯು–ಡೈಸ್' (ಜಿಲ್ಲಾ ಸಮಗ್ರ ಮಾಹಿತಿ ಸಂಗ್ರಹ ವ್ಯವಸ್ಥೆ) 2016–17ರ ವರದಿಯ ಮುಖ್ಯಾಂಶಗಳನ್ನು ಅವಲೋಕಿಸಿದರೆ, ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವುದು ಅಗತ್ಯ ಎಂದು ನಮಗೆ ಯಾರಿಗೂ ಅನ್ನಿಸುತ್ತಿಲ್ಲ ಎಂಬ ಭಾವನೆ ಗಟ್ಟಿಗೊಳ್ಳುತ್ತದೆ. ರಾಜ್ಯದಲ್ಲಿ 40 ಸಾವಿರ ಶಾಲೆಗಳಿಗೆ ಸಮರ್ಪಕ ಕಟ್ಟಡ ಇಲ್ಲ. 19,542 ಶಾಲೆಗಳು ಆಟದ ಮೈದಾನ ಹೊಂದಿಲ್ಲ. 10 ಸಾವಿರ ಶಾಲೆಗಳಿಗೆ ಆವರಣ ಗೋಡೆ ಇಲ್ಲ. 2,000 ಶಾಲೆಗಳಲ್ಲಿ ಬಾಲಕ – ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇಲ್ಲ. ಸರಿಯಾದ ಸೂರೇ ಇಲ್ಲದ ಶಾಲೆಗೆ ಮಕ್ಕಳನ್ನು ಕಳುಹಿಸಿ ಅಂತ ಹೇಳುವುದಾದರೂ ಹೇಗೆ? ಸರ್ಕಾರಿ ಶಾಲೆಗಳ ಬಗೆಗಿನ ಅನಾದರಕ್ಕೆ ಮೂಲ ಸೌಕರ್ಯ ಕೊರತೆ ಒಂದು ಪ್ರಮುಖ ಕಾರಣ ಎಂಬುದು ಕೆಲವು ತಜ್ಞರ ಅಭಿಮತ. ಶಾಲೆಗಳ ಈ ದಯನೀಯ ಸ್ಥಿತಿ ನೋಡಿದರೆ ಅವರ ವಾದ ಸರಿಯೆನಿಸಬಹುದು. ಇತ್ತ ಅಗತ್ಯ ಸೌಕರ್ಯಗಳೂ ಇಲ್ಲ. ಅತ್ತ ಪೋಷಕರ ನಂಬಿಕೆಯನ್ನೂ ಉಳಿಸಿಕೊಂಡಿಲ್ಲ. ಇಂಥ ಸ್ಥಿತಿಯಲ್ಲಿ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಧೈರ್ಯ ಯಾವ ಪೋಷಕರಲ್ಲಿ ಉಳಿಯಲು ಸಾಧ್ಯ?

ಸರ್ಕಾರಿ ಶಾಲೆಗಳೆಲ್ಲವೂ ಕನ್ನಡ ಶಾಲೆಗಳು. ಈ ಶಾಲೆಗಳು ಉಳಿದರೆ ಮಾತ್ರ ಕನ್ನಡ ಉಳಿಯುತ್ತದೆ ಎಂದು ಚಿಂತಕರು ಎಚ್ಚರಿಸುತ್ತಲೇ ಇದ್ದಾರೆ. ಪರಿಸರದ ಭಾಷೆಯ ಉಳಿವಿನ ಜೊತೆ ಹೀಗೆ ನೇರ ನಂಟು ಹೊಂದಿರುವ ಈ ಶಾಲೆಗಳ ಅವನತಿಗೆ ಸರ್ಕಾರದ ಕಡೆ ಬೆರಳು ತೋರಿಸಿ ಸುಮ್ಮನಾಗುವುದರಿಂದ ಏನೇನೂ ಪ್ರಯೋಜನವಿಲ್ಲ. ಸರ್ಕಾರದ ಜೊತೆ  ಸಮುದಾಯ ಕೂಡ ಇದರ ಹೊಣೆ ಹೊರಬೇಕಾಗುತ್ತದೆ. ಒತ್ತಡ ಹೇರುವ ಸಾಮರ್ಥ್ಯವುಳ್ಳ ಸಮುದಾಯ ತಮಗೂ ಸರ್ಕಾರಿ ಶಾಲೆಗೂ ಸಂಬಂಧವೇ ಇಲ್ಲ ಎಂಬಂತಿದೆ. ತಮ್ಮ ಮಕ್ಕಳು ಹೇಗೂ ಸರ್ಕಾರಿ ಶಾಲೆಗೆ ಹೋಗುವುದಿಲ್ಲ ಎಂಬ ವ್ಯಕ್ತಿ ನೆಲೆಯ ಸ್ವಾರ್ಥ ಅವರನ್ನು ಮೌನಕ್ಕೆ ದೂಡಿದೆ. ಅಂಥವರೆಲ್ಲ ಭಾಷೆಯ ಉಳಿವಿನ ನೆಲೆಯಲ್ಲಾದರೂ ಸರ್ಕಾರಿ ಶಾಲೆಗಳ ಉಳಿವಿನ ಅಗತ್ಯವನ್ನು ಮನಗಾಣಬೇಕಾಗಿದೆ.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಥಿಲಾವಸ್ಥೆಯಲ್ಲಿರುವ 36 ಸಾವಿರ ಕೊಠಡಿಗಳನ್ನು ನೆಲಸಮ ಮಾಡಲು ಸೂಚಿಸಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ತನ್ವೀರ್ ಸೇಠ್ ಸದನದಲ್ಲಿ ಹೇಳಿಕೆ ನೀಡಿದ್ದಾರೆ. ಶಾಲಾ ಕಟ್ಟಡಗಳನ್ನು ಕಾಲಕಾಲಕ್ಕೆ ದುರಸ್ತಿ ಮಾಡಿಸಿದ್ದಿದ್ದರೆ ಕೊಠಡಿಗಳನ್ನು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನೆಲಸಮ ಮಾಡಬೇಕಾದ ಪ್ರಮೇಯ ಒದಗುತ್ತಿರಲಿಲ್ಲ. ಶಿಕ್ಷಣ ಇಲಾಖೆಗೆ ಬಜೆಟ್‌ನಲ್ಲಿ ತೆಗೆದಿರಿಸುವ ಹಣದ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಶಿಕ್ಷಕರ ವೇತನ ಮತ್ತು ವಿದ್ಯಾರ್ಥಿಗಳಿಗೆ ಒದಗಿಸುವ ಸೌಲಭ್ಯಗಳಿಗೇ  ಅದು ಸಾಕಾಗುತ್ತಿಲ್ಲ ಎಂಬ ದೂರು ಇದೆ. ವೋಟಿನ ಮೇಲೆ ಕಣ್ಣಿಟ್ಟು ಘೋಷಿಸುವ ಜನಪ್ರಿಯ ಯೋಜನೆಗಳಿಗೆ ವಿನಿಯೋಗಿಸುವ ಮೊತ್ತದಲ್ಲಿ ಒಂದಷ್ಟು ಕಡಿತ ಮಾಡಿ, ಕಡಿತಗೊಳಿಸಿದ್ದರಿಂದ ಸಿಗುವ ಹಣದಿಂದ ಸರ್ಕಾರಿ ಶಾಲೆಗಳ ಬುನಾದಿ ಭದ್ರಗೊಳಿಸಲಿ. ಆಡಳಿತಾರೂಢರಿಗೆ ಅಕ್ಷರತಾಯಿ ಅಂಥ ಸದ್ಬುದ್ಧಿ ಕರುಣಿಸಲಿ.

■ ಎನ್. ಉದಯಕುಮಾರ್

ಸರ್ಕಾರಿ ಶಾಲೆಗಳೆಲ್ಲವೂ ಕನ್ನಡ ಶಾಲೆಗಳು. ಈ ಶಾಲೆಗಳು ಉಳಿದರೆ ಮಾತ್ರ ಕನ್ನಡ ಉಳಿಯುತ್ತದೆ ಎಂದು ಚಿಂತಕರು ಎಚ್ಚರಿಸುತ್ತಲೇ ಇದ್ದಾರೆ. ಪರಿಸರದ ಭಾಷೆಯ ಉಳಿವಿನ ಜೊತೆ ಹೀಗೆ ನೇರ ನಂಟು ಹೊಂದಿರುವ ಈ ಶಾಲೆಗಳ ಅವನತಿಗೆ ಸರ್ಕಾರದ ಕಡೆ ಬೆರಳು ತೋರಿಸಿ ಸುಮ್ಮನಾಗುವುದರಿಂದ ಏನೇನೂ ಪ್ರಯೋಜನವಿಲ್ಲ. ಸರ್ಕಾರದ ಜೊತೆ ಸಮುದಾಯ ಕೂಡ ಇದರ ಹೊಣೆ ಹೊರಬೇಕಾಗುತ್ತದೆ.



ಈಶ್ವರ್